**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 20-11-2023.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್ ಕೆ ಎನ್ ವಕೀಲರಿಂದಃ</u>**

1. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟು ಬರೆಸಿದ್ದೆನೆ. ನಮ್ಮ ಕುಟುಂಬಕ್ಕೆ ಮೂಲ ಪುರುಷ ಭೀಕಾ ಅಂದರೆ ನಿಜ. ಅವರಿಗೆ ಇಬ್ಬರು ಮಕ್ಕಳು ನೇಯಾ ಹಾಗೂ ತಾನಾ. ಸದರಿ ಇಬ್ಬರು ತೀರಿಕೊಂಡಿದ್ದಾರೆ. ನೇಯಾ ರವರಿಗೆ ಮೂರು ಜನ ಮಕ್ಕಳು ಅವರು ನಾರಾಯಣ, ಲಕ್ಷ್ಮಣ ಹಾಗೂ ಅರ್ಜುನ. ತಾನಾ ರವರಿಗೆ ಭೀಕಾ, ವಿಷ್ಣು ಹಾಗೂ ಬೀವಾ ಮಕ್ಕಳು. ಸದರಿ ನಾರಾಯಣ, ಲಕ್ಷ್ಮಣ ಹಾಗೂ ಅರ್ಜುನ, ಭೀಕಾ, ವಿಷ್ಣು ಹಾಗೂ ಬೀವಾ ತೀರಿಕೊಂಡಿರುತ್ತಾರೆ. ಸದರಿ ರವರ ಎಲ್ಲಾ ವಾರಸುದಾರರು ಈ ದಾವೆಯಲ್ಲಿ ಪಕ್ಷಗಾರರು ಇದ್ದಾರೆ ಎಂದರೆ ನಿಜ.

2. ಭೀಕಾ ತೀರಿಕೊಂಡ ನಂತರ ಅವರ ಹಿರಿಯ ಮಗ-ನೇಯಾ ಮನೆಯ ಜವಾಬ್ದಾರಿ ವಹಿಸಿದ್ದಾರೆ ಎಂದರೆ ನಿಜ. ನೇಯಾ ತೀರಿಕೊಂಡ ನಂತರ ಅವರ ಹಿರಿಯ ಮಗ ನಾಯಾರಾಯರವರು ಕುಟುಂಬದ ಕರ್ತನಾಗಿ ಕುಟುಂಬದ ಜವಾಬ್ದಾರಿ ವಹಿಸಿದ್ದರು ಎಂದರೆ ನಿಜ. ಸಾಕ್ಷಿಯು ಮುಂದುವರೆದು ಬೀಕಾ ರವರು ತೀರಿಕೊಂಡ ನಂತರ ನೇಯಾ ಮತ್ತು ತಾನಾ ರವರು ಬೇರೆ ಬೇರೆ ಆದರು ಎಂದು ನುಡಿಯುತ್ತಾರೆ. ಸದರಿ ರವರು ಯಾವಾಗ ಬೇರೆ ಬೇರೆ ಆದರು ಎನ್ನುವ ಮಾಹಿತಿ ನನಗೆ ಇಲ್ಲ, ನಮ್ಮ ತಂದೆಗೆ ಇತ್ತು. ಬೇರೆ ಬೇರೆ ಆದರು ಎಂದು ತೋರಿಸಲು ಏನು ಪುರಾವೆ ಇದೆ ಎಂದರೆ ಸಾಕ್ಷಿಯು ಇಬ್ಬರು ಬೇರೆ ಬೇರೆ ಮನೆಗಳಲ್ಲಿ ವಾಸ

ಇರುತ್ತಿದ್ದರು ಎಂದು ಹೇಳುತ್ತಾರೆ. ಸದರಿ ರವರು ಯಾವ ದಿನಾಂಕ, ತಿಂಗಳು ವರ್ಷದಂದು ಹಾಗೂ ಯಾರ ಸಮಕ್ಷಮ ಬೇರೆಯಾದರು ಎಂದು ಹೇಳಲು ಬರುವುದಿಲ್ಲ. ನೇಯಾ ಹಾಗೂ ತಾನಾ ರವರು ಯಾವ ಯಾವ ವಯಸ್ಸಿ ನಲ್ಲಿ ತೀರಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಸದರಿರವರಲ್ಲಿ ಯಾರು ಮೊದಲು ತೀರಿಕೊಂಡರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನಾರಾಯಣ ರವರು ಹಿರಿಯ ಮಗ ಹಾಗೂ ಕರ್ತ ಆಗಿದ್ದರಿಂದ ಒಟ್ಟು ಕುಟುಂಬದ ಕೊಡುವ-ತೆಗೆದುಕೊಳ್ಳುವ ವ್ಯವಹಾರ, ಪೂಜಾ ಆರ್ಚಣೆ ವ್ಯವಹಾರಗಳನ್ನು ಅವರೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಇಬ್ಬರು ಬೇರೆ ಬೇರೆ ಇದ್ದರು ಎಂದು ಹೇಳುತ್ತಾರೆ. ನನಗೆ ನಾರಾಯಣ, ಲಕ್ಷ್ಮಣ ಹಾಗೂ ಅರ್ಜುನ ರವರ ಜನ್ಮ ತಾರೀಖು ಗೊತ್ತಿಲ್ಲ. ನಾರಾಯಣ ತಂದೆ ನೇಯಾ ಹಾಗೂ ಭೀಕಾ ತಂದೆ ತಾನಾರವರಲ್ಲಿ ನಾರಾಯಣ ಹಿರಿಯ ಎಂದರೆ ನಿಜ. ನಾರಾಯಣ ರವರೆ ಕಂದಾಯ ಇಲಾಖೆಗಳಲ್ಲಿ ಅರ್ಜಿಗಳನ್ನು ಸಲ್ಲಿಸುವುದು ಹಾಗೂ ಅಲ್ಲಿಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಅವರ ಮನೆತನ ವ್ಯವಹಾರಗಳನ್ನು ಮಾತ್ರ ನೋಡಿಕೊಳ್ಳುತ್ತಿದ್ದರು. ಹಾಗೂ ಬೀಕಾ ರವರ ಕುಟುಂಬದ ವ್ಯವಹಾರಗಳನ್ನು ಅವರವರೆ ನೋಡಿಕೊಳ್ಳುತ್ತಿದ್ದರು. ಸದರಿ ತಾನಾ ರವರ ಮೂರು ಜನ ಮಕ್ಕಳಲ್ಲಿ ಯಾರು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಅವರಿಗೆ ಗೊತ್ತು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

3. ವಾದಿಯರ ಕುಟುಂಬದಲ್ಲಿ ವ್ಯವಹಾರವನ್ನು ಯಾರು ನೋಡಿಕೊಳ್ಳುತ್ತಿದ್ದರು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ. ಮೂಲ ಪುರುಷ ಭೀಕಾ ರವರ ಕುಟುಂಬ ಇನ್ನು ಒಟ್ಟು ಕುಟುಂಬ ಇದೆ ಅವರ ಆಸ್ತಿಗಳಲ್ಲಿ ಪಾಲುವಾಟ್ನಿ ಆಗಿಲ್ಲ ಎಂದರೆ ಸರಿಯಲ್ಲ. ನೇಯಾ ಮತ್ತು ತಾನಾ ರವರ ಮಕ್ಕಳಲ್ಲಿ ಪಾಲುವಾಟ್ನಿಆಗಿದೆ ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದಿರಾ ಎಂದರೆ ಸಾಕ್ಷಿಯು ಸದರಿ ರವರು ಎಲ್ಲರು ಬೇರೆ ಬೇರೆ ಆಗಿದ್ದಾರೆ ಎಂದು ಹೇಳುತ್ತಾರೆ. ದಾವಾ ಜಮೀನುಗಳ ಸರ್ವೆ ನಂ.2/2, 3/2, 5, 8, 12/1, 12/19, 30 ಜಮೀನುಗಳಲ್ಲಿ ವಾದಿ ಹಾಗೂ ಪ್ರತಿವಾದಿಗಳ ಹೆಸರು ಜಂಟಿಯಾಗಿ ಇಲ್ಲಿಯವರೆಗೆ ಬರುತ್ತಿದೆ ಎಂದರೆ ಸಾಕ್ಷಿಯು 2/2, 3/2, 3/1, 5, 12, 12/19, 19 ಗಳಲ್ಲಿ ಮಾತ್ರ ಜಂಟಿ ಹೆಸರುಗಳು ಬರುತ್ತಿವೆ ಎಂದು ಹೇಳುತ್ತಾರೆ. ಸದರಿ ರವರ ಹೆಸರುಗಳು ಜಂಟಿಯಾಗಿ ಯಾವ ಕಾರಣಕ್ಕೆ ಬರುತ್ತಿವೆ ಎಂದರೆ ಸಾಕ್ಷಿಯು ಅವರು ಈ ಉತಾರಗಳಲ್ಲಿ ತಮ್ಮ ಹೆಸರುಗಳನ್ನು ಸೇರಿಸಿಕೊಂಡಿದ್ದಾರೆ ಆದ್ದರಿಂದ ಬರುತ್ತಿವೆ ಎಂದು ಹೇಳುತ್ತಾರೆ. ಯಾವಾಗ ಹಚ್ಚಿಕೊಂಡಿದ್ದಾರೆ ಎಂದು ಸಾಕ್ಷಿಯು ಅವರ ತಂದೆ -ತಾನಾ ತೀರಿಕೊಂಡನಂತರ ಹಚ್ಚಿ ಕೊಂಡಿದ್ದಾರೆ ಎಂದು ಹೇಳುತ್ತಾರೆ. ಬೀಕಾ ತೀರಿಕೊಂಡ ನಂತರ ತಾನಾ ರವರ ಮಕ್ಕಳು ಹೆಸರನ್ನು ಹಚ್ಚಿಕೊಂಡಿದ್ದಾರೆ, ತಾನಾ ತೀರಿಕೊಂಡ ನಂತರ ಬೀಕಾರವರ ಮಕ್ಕಳು ಹೆಸರನ್ನು ಹಚ್ಚಿಕೊಂಡಿದ್ದಾರೆ. ನಮ್ಮ ಹೆಸರುಗಳು ನಮ್ಮ ತಂದೆ ತೀರಿಕೊಂಡ ನಂತರ ಹಚ್ಚಿ ಕೊಂಡಿದ್ದೆವೆ. ಆಸ್ತಿಗಳು ಪೂರ್ವಜರ ಆಸ್ತಿ ಆಗಿದ್ದರಿಂದ ಅವರ ಹೆಸರುಗಳು ಹಚ್ಚಿವೆ ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ.

ವಾದಿ  ಪರ ವಕೀಲರು ಕಾಲಾವಕಾಶ ಕೋರಿರುವುದರಿಂದ ಮುಂದುವರೆದ ಪಾಟೀ ಸವಾಲು ಮುಂದುಡಲಾಯಿತು.

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**